O.S. ನಂಬರಃ 66/2021
ಡಿ. ಡಬ್ಲ್ಯೂಃ 1

ದಿಃ 06-03-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ</u> ವಾದಿಯ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ವಾದಿಯು ಸಲ್ಲಿಸಿದ ದಾವೆಯನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಯು ದಾವೆಯಲ್ಲಿ ತೋರಿಸಿದ ವಂಶಾವಳಿ ಸರಿಯಾಗಿದೆ ಎಂದರೆ ಸರಿ. ವಾದಿಯು ಯಾವ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ ದಾವೆಯನ್ನು ದಾಖಲಿಸಿರುತ್ತಾರೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಸರ್ವೆ ನಂ.371,168 ಹಾಗೂ ಉಳಿದ ಸರ್ವೆ ನಂಬರುಗಳು ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಲು ನಿಮ್ಮ ವಕೀಲರಿಗೆ ಯಾರು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಸರ್ವೆ ನಂಬರನ್ನು ಈ ದಾವೆಯಲ್ಲಿ ಸೇರಿಸಬೇಕು ಎಂದು ನಿಮ್ಮ ಉದಾಹರಣೆ ಸಲ್ಲಿಸುವ ಸಮಯದಲ್ಲಿ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಬಿಟ್ಟು ಹೋದ ಆಸ್ತಿಗಳನ್ನು ಸೇರಿಸಬೇಕು ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿಯು ಸರ್ವೆ ನಂ.133 ಮತ್ತು ಇನ್ನೊಂದು ಸರ್ವೆ ನಂಬರು ನೆನಪಿರುವುದಿಲ್ಲ. ನೀವು ಹೇಳಿದ ಸರ್ವೆ ನಂಬರು ಯಾರ ಹೆಸರಿನಲ್ಲಿ ಇತ್ತು ಎಂದು ಹೇಳಲು ಆಗುತ್ತಾ ಎಂದರೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ಮೂಲದಲ್ಲಿ

ಯಾರಿಂದ ಬಂದಂತಹ ಆಸ್ತಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಮಂಕಾಳಿ ಗೌಡ ಇವರಿಂದ ಬಂದಿರುತ್ತವೆ ಎಂದು ನುಡಿಯುತ್ತಾರೆ. ಮಂಕಾಳಿಗೆ ಯಾವ ರೀತಿಯಿಂದ ಆಸ್ತಿ ಬಂದಿರುತ್ತವೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಮಂಕಾಳಿ ನಂತರ ಆಸ್ತಿಗಳು ಯಾರಿಗೆ ಬಂದವು ಎಂದರೆ ಕುಸ್ಲುಗೆ ವಿಲ್ ಮೂಲಕ ಬಂದಿರುತ್ತವೆ ಎಂದು ನುಡಿಯುತ್ತಾರೆ. ವಿಲ್ಲನ್ನು ನಿಮ್ಮ ಪ್ರಕಾರ ಯಾರು ಮಾಡಿರುತ್ತಾರೆ ಎಂದರೆ ನಮ್ಮ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ಲನ್ನು ಎಲ್ಲಿ ಮಾಡಿರುತ್ತಾರೆ ಎಂದರೆ ತಹಶೀಲ್ದಾರ ಕಚೇರಿಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ಲನ್ನು ಯಾವಾಗ ಮಾಡಿರುತ್ತಾರೆ ಎಂದರೆ 1986 ರಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ಲಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮೃತ್ಯು ಪತ್ರಕ್ಕೆ ಯಾರು ಸಾಕ್ಷಿದಾರರು ಹಾಗೂ ದಸ್ತುರ ಇದ್ದರು ಎಂದು ಹೇಳಲು ಬರುವುದಿಲ್ಲ, ನಮ್ಮ ತಂದೆಯವರು ಬರೆಸಿರುತ್ತಾರೆ. ಮೃತ್ಯು ಪತ್ರ ನಿಮಗೆ ಎಲ್ಲಿ ಸಿಕ್ಕಿತ್ತು ಎಂದರೆ ಸಾಕ್ಷಿಯು ಮುಟೇಶನ್ ನಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮುಟೇಶನ್ ಎಂಟ್ರಿ ಮೃತ್ಯು ಪತ್ರದ ಪ್ರಕಾರ ಆಗಿರುವುದಿಲ್ಲ ಎಂದರೆ ಸರಿ. ನೀವು ಹೇಳಿದ ಮೃತ್ಯು ಪತ್ರದ ಮೂಲ ಪ್ರತಿ ಎಲ್ಲಿ ಇದೆ ಎಂದು ಹುಡುಕಲು ಪ್ರಯತ್ನಪಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರಿಗೆ ಮೃತ್ಯು ಪತ್ರದ ಬಗ್ಗೆ ವಿಚಾರಿಸಲು ಪ್ರಯತ್ನಪಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ದಾಖಲೆಯನ್ನು ಹುಡುಕಬೇಕಾದರೆ ಮೃತ್ಯು ಪತ್ರ ಸಿಕ್ಕಿರುತ್ತದೆ ಎಂದರೆ ಸಾಕ್ಷಿಯು ರೆಕಾರ್ಡ ಉತಾರ ಹುಡುಕಬೇಕಾದರೆ ಸಿಕ್ಕಿರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ಮೃತ್ಯು ಪತ್ರವನ್ನು ಬಿಟ್ಟರೆ ಬೇರೆ

ಮೃತ್ಯು ಪತ್ರ ಇರುವುದಿಲ್ಲ ಎಂದರೆ ಸರಿ.  ನಿಮ್ಮ ಉದಾಹರಣೆಯಲ್ಲಿ ಬರೆದ ಮುಟೇಶನ ಎಂಟ್ರಿ ನಂ.3841 ಯಾವುದಕ್ಕೆ ಸಂಬಂಧಪಟ್ಟ ಎಂಟ್ರಿ ಎಂದು ಹೇಳಲು ಬರುತ್ತಾ ಎಂದರೆ ಹೇಳಲು ಬರುವುದಿಲ್ಲ.  ನೀವು ಸರಸನಿರಸ ವಾಂಟಣಿಯಾಗಿರುತ್ತದೆ ಎಂದು ನಮೂದು ಮಾಡಿದ್ದು, ಅದೇನಾದರೂ ನೊಂದಾಯಿತ ದಾಖಲಾತಿ ಆಗಿತ್ತಾ  ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಆದೇಶವೇನಾದರೂ ಆಗಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನಮೂದಿಸಿದ ಮುಟೇಶನ ಎಂಟ್ರಿ ನಂ.4027 ಇದು ಯಾವುದಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳಲು ಬರುತ್ತಾ ಎಂದರೆ ಗೊತ್ತಿರುವುದಿಲ್ಲ. ಕುಸ್ಲು ಇವರಿಗೆ ಹಾಗೂ ಲಿಂಗು ಕರಿಯಾ ಗೌಡ ಇವರಿಗೆ ಎಷ್ಟು ಜಮೀನುಗಳು ಬಂದಿರುತ್ತವೆ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಲಿಂಗು ಇವರಿಗೆ ಸರ್ವೆ ನಂ.133 ರಲ್ಲಿ 8 ಗುಂಟೆ  ಹಾಗೂ ಕುಸ್ಲು ಇವರಿಗೆ ಸರ್ವೆ ನಂ.133 ರಲ್ಲಿ 4 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಲಿಂಗು ಮತ್ತು ಕುಸ್ಲು ಇವರಿಗೆ ಆಸ್ತಿ ಬಂತು ಎಂದ ಸಂದರ್ಭದಲ್ಲಿ  ದೇವಿ, ಲಿಂಗು,ರಾಮಿ, ಇಡಕಿ ಇವರು ಜೀವಂತ ಇದ್ದರು ಎಂದರೆ ಸರಿ. ಮುಟೇಶನ ಎಂಟ್ರಿ ನಂ.4027 ಆಗುವ ಸಂದರ್ಭದಲ್ಲಿ ನಿಮ್ಮ ತಂದೆಯವರ ಸಹೋದರಿಯರನ್ನು ತೋರಿಸಿರುವುದಿಲ್ಲ ಎಂದರೆ ಸರಿ.  ಹೆಣ್ಣುಮಕ್ಕಳಿಂದ ನೊಂದಾಯಿತ ಹಕ್ಕು ಬಿಡುಗಡೆ ಪತ್ರವನ್ನು ನಿಮ್ಮ ತಂದೆಯವರು ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಮುಟೇಶನ ಆದ ಬಗ್ಗೆ ನಿಮ್ಮ ತಂದೆಯವರ ಸಹೋದರಿಯರಿಗೆ ಮಾಹಿತಿಯನ್ನೂ ಸಹ ಕೊಟ್ಟಿರುವುದಿಲ್ಲ ಎಂದರೆ ಸರಿ.   ಸದರಿ ಮುಟೇಶನ ಆಗುವ ಸಮಯದಲ್ಲಿ ನಿಮ್ಮ ತಂದೆ ಹಾಗೂ ಲಿಂಗು ಸೇರಿಕೊಂಡು ಕಂದಾಯ ಇಲಾಖೆಯವರೊಂದಿಗೆ ಸೇರಿಕೊಂಡು ಮಾಡಿಸಿಕೊಂಡಿರುತ್ತಾರೆ ಎಂದರೆ ಮೌನವಾಗಿರುತ್ತಾರೆ.

2. ನೀವು ಹೇಳಿದ ಮೃತ್ಯು ಪತ್ರಕ್ಕೆ ಸಂಬಂಧಪಟ್ಟಂತೆ ಯಾವುದೇ ಮುಟೇಶನ ಪ್ರಕ್ರಿಯೇ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ದಾವಾ ಆಸ್ತಿಗಳು ಮೂಲದಲ್ಲಿ ಕರಿಯಾ ಕುಸ್ಲು ಗೌಡ ಇವರಿಗೆ ಮಂಜೂರಾದ ಜಮೀನುಗಳು ಎಂದರೆ ಸರಿ. ಅದಕ್ಕೆ ಸಂಬಧಪಟ್ಟು ಮುಟೇಶನ ಎಂಟ್ರಿ ನಂ.2843 ದೃಢೀಕರಿಸಲಾಗಿದೆ ಎಂದರೆ ಸರಿ. ಕರಿಯಾ ಕುಸ್ಲು ಗೌಡ ಇವರು ಯಾವಾಗ ಮರಣಪಟ್ಟಿರುತ್ತಾರೆ ಎಂದು ಹೇಳಲು ಆಗುತ್ತಾ ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕರಿಯಾ ಕುಸ್ಲು ಗೌಡ ಇವರು ಮರಣಪಟ್ಟ ನಂತರ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ದಾವಾ ಆಸ್ತಿಗಳು ಮಂಕಾಳಿ ಗೌಡ ಇವರಿಗೆ ವಾರಸಾನಾತೆಯಿಂದ ಬಂದಿರುತ್ತವೆ ಎಂದರೆ ಸರಿ. ಕರಿಯಾ ಕುಸ್ಲು ಗೌಡ ಮರಣಪಡುವ ಸಂದರ್ಭದಲ್ಲಿ ಅವರ ಮಕ್ಕಳಾದ ದೇವಿ, ಲಿಂಗು, ರಾಮಿ ಮತ್ತು ಇಡಕಿ ಇವರು ಜೀವಂತ ಇದ್ದರು ಎಂದರೆ ಸರಿ. ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ಆದಂತಹ ಮುಟೇಶನ್, ಮುಟೇಶನ್ ಎಂಟ್ರಿ ನಂ.3851 ರಂತೆ ಕಂದಾಯ ಇಲಾಖೆಯಲ್ಲಿ ದೃಢೀಕರಿಸಲಾಗಿದೆ ಎಂದರೆ ಸರಿ. ಮುಟೇಶನ್ ಎಂಟ್ರಿ ನಂ. 3841 ರ ಪ್ರಕಾರ ಮಂಕಾಳಿ ಗೌಡ ಇವರು ವಾಂಟಣಿ ಮಾಡಿರುತ್ತಾರೆ ಎಂದರೆ ಸರಿ. ವಾಂಟಣಿಯ ಸಂದರ್ಭದಲ್ಲಿ ದೇವಿ, ಲಿಂಗು, ರಾಮಿ, ಇಡಕಿ, ರೋಹಿನಿ ಮತ್ತು ಕುಸ್ಲು ಇವರಿಗೆ ಸರ್ವೆ ನಂ.133/1 ಮತ್ತು 133/10 ರಲ್ಲಿ ಜಮೀನನ್ನು ಕೊಡಲಾಯಿತು ಎಂದರೆ ಸರಿ. ಅದೇ ಪ್ರಕಾರ ತಾಯಿಯು ಸರ್ವೆ ನಂ.39/3, 168,321,138/10 ನೆದ್ದನ್ನು ತಮ್ಮ ಹೆಸರಿಗೆ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ಮಂಕಾಳಿ ಯಾವಾಗ ಮರಣಪಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಮಂಕಾಳಿ ಇವರು ಮರಣಪಟ್ಟ ನಂತರ ಆಕೆಯ ಹೆಸರಿನಲ್ಲಿ ಇದ್ದ ಆಸ್ತಿಗಳನ್ನು ನಿಮ್ಮ ತಂದೆ ಹಾಗೂ ಲಿಂಗು ಇವರು ತಮ್ಮ ಹೆಸರಿಗೆ

ಹಚ್ಚಿಕ್ಕೊಂಡರು ಎಂದರೆ ಸರಿ. ಇದಕ್ಕೆ ಸಂಬಂಧಪಟ್ಟು ಮುಟೇಶನ್ ಎಂಟ್ರಿ ನಂ.4027 ಆಗಿರುತ್ತದೆ ಎಂದರೆ ಸರಿ. ಮಂಕಾಳಿ ಇವರು ಮರಣಪಟ್ಟ ನಂತರ ಕುಸ್ಲು ಹಾಗೂ ಲಿಂಗು ಇವರಿಗೆ ಯಾವ ಯಾವ ಆಸ್ತಿಗಳು ಹೋಗಿರುತ್ತವೆ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ನನ್ನ ತಂದೆಗೆ ಸರ್ವೆ ನಂ.321 ಮತ್ತು 168 ಹಾಗೂ ಲಿಂಗು ಇವರಿಗೆ ಸರ್ವೆ ನಂ.133 ಹೋಗಿರುತ್ತದೆ ಎಂದು ನುಡಿಯುತ್ತಾರೆ. ವಾರಸಾ ಆದರೆ ಎಲ್ಲ ಆಸ್ತಿಗಳಲ್ಲಿ ಮಕ್ಕಳಿಗೂ ಸಹ ಸಮಾನ ಹಕ್ಕು ಬರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ, ವಿಲ್ ಮುಖಾಂತರ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ ಮುಖಾಂತರ ಮಾಡಿಕೊಂಡಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದು, ಅದನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಿಲ್ ಪ್ರಕಾರ ಯಾರಿಗೆ ಯಾವ ಆಸ್ತಿ ಹೋಗಬೇಕು ಎಂದು ನಮೂದು ಆಗಿರುತ್ತದೆ ಎಂದು ಹೇಳಲು ಆಗುತ್ತಾ ಎಂದರೆ ಸರ್ವೆ ನಂ.133 ರಲ್ಲಿ ವಾದಿಗೆ 5 ಗುಂಟೆ, ಲಿಂಗು ಕರಿಯಾ ಗೌಡ ಸರ್ವೆ ನಂ.133 ರಲ್ಲಿ ಇವರಿಗೆ 8 ಗುಂಟೆ ಹೋಗಬೇಕು ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಮೃತ್ಯು ಪತ್ರದ ಮೇಲೆ ಯಾವುದೇ ಮುಟೇಶನ್ ಪ್ರಕ್ರಿಯೇ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ನೀವು ಮೃತ್ಯುಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದರಿಂದ ಮುಟೇಶನ ಎಂಟ್ರಿ ಮಾಡಿಸಲು ಕೊಟ್ಟಿರುವುದಿಲ್ಲ ಎಂದರೆ ಮೌನವಾಗಿರುತ್ತಾರೆ. ಮುಟೇಶನ್ ಎಂಟ್ರಿ ನಂ. 4027 ಆಗುವ ಸಂದರ್ಭದಲ್ಲಿ ಮೇಲೆ ಹೇಳಿದ ಮಂಕಾಳಿ ಗೌಡ ಇವರ ಹೆಣ್ಣು ಮಕ್ಕಳು ಜೀವಂತ ಇದ್ದರು ಎಂದರೆ ಸರಿ. ವಾರಸಾ ಆಗಬೇಕಿದ್ದರೆ ಮಂಕಾಳಿ ಇವರು ಹೆಣ್ಣುಮಕ್ಕಳಿಗೆ ಹೇಳಿದ್ದಾಗಲಿ ಅಥವಾ ಅವರ ಒಪ್ಪಿಗೆಯನ್ನು ಪಡೆದುಕೊಂಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿ. ಕುಸ್ಲು ಇವರ ಮಕ್ಕಳಲ್ಲಿ ಯಾರು

ದೊಡ್ಡವರು ಎಂದರೆ ಸಾಕ್ಷಿಯು ತೇಕಿ ಎಂದು ನುಡಿಯುತ್ತಾರೆ. ಜಾನಕಿ ನನ್ನ ತಾಯಿ. ತೇಕಿ ಹಾಗೂ ಜಾನಕಿ ಇವರಿಗೆ ಈ ಪ್ರಕರಣದ ದಾವಾ ಆಸ್ತಿಗಳ ಬಗ್ಗೆ ಹೆಚ್ಚು ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ಅವರು ಶಾಲೆ ಕಲಿತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಎಷ್ಟನೇ ತರಗತಿ ಕಲಿತಿರುತ್ತೀರಿ ಎಂದರೆ ಸಾಕ್ಷಿಯು 10ನೇ ತರಗತಿ ಕಲಿತಿರುತ್ತೇನೆ ಎಂದು ನುಡಿಯುತ್ತಾರೆ. ತೇಕಿ ಮತ್ತು ಜಾನಕಿ ಇವರಿಗೆ ಸಾಮಾನ್ಯವಾದ ಜ್ಞಾನ ಇರುತ್ತದೆ ಎಂದರೆ ಸರಿ. ಮೃತ್ಯು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದ ಕಾರಣ ತೇಕಿ ಹಾಗೂ ಜಾನಕಿ ಇವರು ಯಾರೂ ಸಹ ಸಾಕ್ಷಿ ಕೊಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4ನೇ ದಾವಾ ಆಸ್ತಿಗಳಲ್ಲಿ ಸಮಪಾಲು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.